**ಕ್ರಿಮಿಸ್ ನಂಃ280/2016**

**ಆರ್.ಡಬ್ಲ್ಯೂ-01**

**ದಿನಾಂಕಃ05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ.ಬಿ.ಪಿ., ವಾದಿ ಪರ ವಕೀಲರಿಂದ**

ನನ್ನ ಮತ್ತು 1 ನೇ ಅರ್ಜಿದಾರರ ಮದುವೆ ವಿದುರಾಶ್ವತ ದಲ್ಲಿ 2010 ನೇ ಸಾಲಿನಲ್ಲಿ ನೆರವೇರಿರುತ್ತದೆ. ಮದುವೆಯ ಸಮಯದಲ್ಲಿ ನನಗೆ 1 ಲಕ್ಷ ರೂ ವರದಕ್ಷಿಣೆ, ಬಟ್ಟೆ , ಕೈ ಗಡಿಯಾರ, ಉಂಗುರ ಮತ್ತು ಎರಡೂ ಕಡೆಯ ಮದುವೆ ಖರ್ಚನ್ನು ಅರ್ಜಿದಾರರೇ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ಪರಶುರಾಮಪುರದಲ್ಲಿ ನಾನು ಮತ್ತು 1 ನೇ ಅರ್ಜಿದಾರಳು 2 ತಿಂಗಳ ಕಾಲ ಇದ್ದೇವು. ನಂತರ ಹಿರಿಯೂರು ತಾಲ್ಲುಕಿನ ಪಟ್ರೆಹಳ್ಳಿಗೆ ಹೊದೇವು. ನನ್ನ ಸ್ವಂತ ಊರು ಪರಶುರಾಮಪುರ. ಪಟ್ರೆಹಳ್ಳಿಯಲ್ಲಿ 2 ತಿಂಗಳ ಕಾಲ ಇದ್ದು ನಂತರ ಅರ್ಜಿದಾರರನ್ನು ತನ್ನ ತವರು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ 2011 ನೇ ಸಾಲಿನಲ್ಲಿ ಪಂಚಾಯತಿ ಮಾಡಿ ಪುಃನ 1 ನೇ ಅರ್ಜಿದಾರರನ್ನು ನಮ್ಮ ಮನೆಗೆ ಬಿಟ್ಟು ಹೋಗಿರುತ್ತಾರೆ. 2011 ನೇ ಸಾಲಿನಲ್ಲಿ 3 ತಿಂಗಳುಗಳ ಕಾಲ ನಾನು ಮತ್ತು 1 ನೇ ಅರ್ಜಿದಾರಳು ಚಳ್ಳಕೆರೆಯಲ್ಲಿ ವಾಸವಿದ್ದೇವು. ನಂತರ ಹೆರಿಗೆಗೆ ಅಂತ ತವರು ಮನೆಗೆ ವಾಪಸ್ಸು ಕರೆದುಕೊಂಡು ಹೋಗಿರುತ್ತಾರೆ. ಹೆರಿಗೆಯಾದ 9 ತಿಂಗಳ ನಂತರ ಪುಃನ 1 ನೇ ಅರ್ಜಿದಾರಳು ಚಳ್ಳಕೆರೆಗೆ ವಾಪಸ್ಸು ಬಂದಿರುತ್ತಾಳೆ. 1 ನೇ ಅರ್ಜಿದಾರರೇ ಸ್ವತಃ ಬಂದಿರುತ್ತಾರೆ. ಚಳ್ಳಕೆರೆಯಲ್ಲಿ ಮುಂದುವರೆದು 6 ತಿಂಗಳುಗಳ ಕಾಲ ಇದ್ದೇವು . ನಂತರ 2 ನೇ ಮಗುವಿಗೆ ಗರ್ಭವತಿಯಾದ ಕಾರಣ 1 ನೇ ಅರ್ಜಿದಾರಳು ಪುಃನ ತನ್ನ ತವರು ಮನಗೆ ಹೋಗಿರುತ್ತಾಳೆ. 1 ನೇ ಅರ್ಜಿದಾರಳೇ ಹೋಗಿರುತ್ತಾಳೆ. ಅಲ್ಲಿಂದ 3 ನೇ ಮಗು ಆದ ನಂತರ 1 ನೇ ಅರ್ಜಿದಾರಳು ನನ್ನ ಮನೆಗೆ ಹಿಂದಿರುಗಿರುತ್ತಾಳೆ. ಈ ಎಲ್ಲಾ ವಿಚಾರಗಳನ್ನು ನನ್ನ ತಕರಾರಿನಲ್ಲಿ ಹೇಳಲಾಗಿದೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ 1 ನೇ ಅರ್ಜಿದಾರಳು ನನ್ನ ಜೊತೆಗೆ 10 ವರ್ಷಗಳ ಕಾಲ ಜೊತೆಯಾಗಿ ಸಂಸಾರ ನಡೆಸಿ 3 ಮಕ್ಕಳಿಗೆ ತಾಯಿಯಾಗಿದ್ದು ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. 1 ನೇ ಅರ್ಜಿದಾರಳಿಗೆ 3 ಜನ ಹೆಣ್ಣು ಮಕ್ಕಳೇ ಹುಟ್ಟಿದ್ದು ಗಂಡು ಸಂತಾನ ಆಗದ ಕಾರಣ ನಾನು ಅವರಿಗೆ ದೈಹಿಕವಾಗಿ ಹಿಂಸೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ 3 ಹೆಣ್ಣು ಮಕ್ಕಳ ಜನನದ ನಂತರ ಮಧ್ಯ ಪಾನ ಮತ್ತು ಇತರೆ ಹೆಣ್ಣು ಮಕ್ಕಳ ಸಹವಾಸದ ಕೆಟ್ಟ ಅಭ್ಯಾಸಕ್ಕೆ ತುತ್ತಾಗಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಅರ್ಜಿದಾರಳನ್ನು ತವರು ಮನೆಯಿಂದ ಹಣವನ್ನು ತರುವಂತೆ ದಿನ ನಿತ್ಯ ಹಿಂಸೆ ನೀಡುತ್ತೀದ್ದೆನೆ ಎಂದರೆ ಸರಿಯಲ್ಲ. ದಿನ ನಿತ್ಯ ದೈಹಿಕವಾಗಿ ಹಿಂಸಿಸಿ ಊಟ ಬಟ್ಟೆ ಕೊಡದೇ 1 ನೇ ಅರ್ಜಿದಾರಳನ್ನು ನಿರ್ಲಕ್ಷಿಸಿರುತ್ತೇನೆ ಎಂದರೆ ಸರಿಯಲ್ಲ. ಮಕ್ಕಳನ್ನು ಪೋಷಿಸದೇ ನಿರ್ಲಕ್ಷಿಸಿರುತ್ತೇನೆ ಎಂದರೆ ಸರಿಯಲ್ಲ. ವರದಕ್ಷಿಣೆ ತರದ ಸಂಬಂಧ 1 ನೇ ಅರ್ಜಿದಾರಳನ್ನು ಅನೇಕ ಬಾರಿ ಮನೆಯಿಂದ ಹೊರ ಹಾಕಿರುತ್ತೆನೆ ಎಂದರೆ ಸರಿಯಲ್ಲ. ಸಮಾಜದಲ್ಲಿ ಗೌರವಕ್ಕೆ ಹೆದರಿ 1 ನೇ ಅರ್ಜಿದಾರಳು ನಾನು ನೀಡಿದ ಎಲ್ಲಾ ಹಿಂಸೆಗಳನ್ನು ಸಹಿಸಿಕೊಂಡಳು ಎಂದರೆ ಸರಿಯಲ್ಲ. ಮದುವೆಯಾದ 5 ವರ್ಷಗಳ ನಂತರ ಒಂದು ದಿನ ರಾತ್ರಿ ವೇಳೆ ನನ್ನ ಮಕ್ಕಳನ್ನು ಮತ್ತು ನನ್ನ ಹೆಂಡತಿಯನ್ನು ಹೊಡೆದು ಮನೆಯಿಂದ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ನನ್ನ ಹೆಂಡತಿ ಮಕ್ಕಳು ಪಕ್ಕದ ಮನೆಯಲ್ಲಿ ಆಶ್ರಯ ಪಡೆದರು ಎಂದರೆ ಸರಿಯಲ್ಲ. ಪಕ್ಕದ ಮನೆಯವರು ಸದರಿ ವಿಚಾರವನ್ನು ನನ್ನ ಹೆಂಡತಿಯ ತವರು ಮನೆಯವರಿಗೆ ತಿಳಿಸಿ ಪಂಚಾಯತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಕ್ಕಳ ವಿಚಾರವಾಗಿ ಚಿಂತಿಸದೇ ಅಮಾನವೀಯವಾಗಿ ಹೊರಹಾಕಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ಹೆಂಡತಿ ಮಕ್ಕಳಿಗೆ ಔಷದ ಉಪಚಾರ ಮಾಡದೇ ಆಹಾರ ನೀಡದೇ ಬಟ್ಟೆ ನೀಡದೇ ನಿರ್ಲಕ್ಷಿಸಿರುತ್ತೇನೆ ಎಂದರೆ ಸರಿಯಲ್ಲ. ಅಗತ್ಯ ವಸ್ತುಗಳನ್ನು ನೀಡದೇ ನಿರ್ಲಕ್ಷ್ಯ ಮಾಡಿದ್ದರಿಂದ 1 ನೇ

ಅರ್ಜಿದಾರಳು ದಿಕ್ಕು ತೋಚದೇ ತನ್ನ ತವರು ಮನೆಗೆ ಹೋಗಿರುತ್ತಾಳೆ ಎಂದರೆ ಸರಿಯಲ್ಲ. 1 ನೇ ಅರ್ಜಿದಾರಳು ತನ್ನ ತವರು ಮನೆಯಲ್ಲಿ ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

4. 1 ನೇ ಅರ್ಜಿದಾರಳು ತನ್ನ ಗಂಡ ಬೇಕು ಎಂದು ಕಲಂ 9 ರಡಿಯಲ್ಲಿ ಚಳ್ಳಕೆರೆಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ರಾಜಿಯಾಗುತ್ತೆವೆ ಎಂದು 1 ನೇ ಅರ್ಜಿದಾರಳನ್ನು ನನ್ನ ಮನೆಗೆ ಕರೆದುಕೊಂಡು ಹೋಗಿ 3 ದಿನಗಳ ನಂತರ ಹೊಡೆದು ಹೊರಹಾಕಿರುತ್ತೇನೆ ಎಂದರೆ ಸಾಕ್ಷಿಯು ಕರೆದುಕೊಂಡು ಹೋಗಿರುವುದು ನಿಜ ಆದರೆ ಹೊಡೆದು ಹೊರ ಹಾಕಿರುವುದು ಸುಳ್ಳು ಎಂದು ನುಡಿಯುತ್ತಾರೆ. ನಾನು ತದ ನಂತರ ವಿಚ್ಚೇಧನ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಮಕ್ಕಳಿಗೆಂದು ರೂ 5,000/- ಗಳನ್ನು ಮಧ್ಯಂತರ ಮಾಸಿಕ ಪಾವತಿಸಬೇಕೆಂದು ಆದೇಶವಾಗಿರುತ್ತದೆ ಎಂದರೆ ಸರಿ. ನಾನು ಬೆಕರಿ ಉತ್ಪನ್ನಗಳನ್ನು ಅಂಗಡಿಗಳಿಗೆ ನೀಡಿ ವ್ಯಾಪಾರ  ಮಾಡುತ್ತೇನೆ. ಸದರಿ ವ್ಯಾಪಾರದಿಂದ ತಿಂಗಳಿಗೆ 1 ರಿಂದ 2 ಲಕ್ಷ ಆದಾಯ ಇದೆ ಎಂದರೆ ಸರಿಯಲ್ಲ. ಮನೆಯಲ್ಲಿ ಚಿಪ್ಸ್ ಫ್ಯಾಕ್ಟರಿ ಇದೆ ಎಂದರೆ ಸರಿಯಲ್ಲ. ಕೆಎ-16-ಎನ್-9983 ರ ವಾಹನವು ನನ್ನದು ಎಂದರೆ ಸಾಕ್ಷಿಯು ನನ್ನದಲ್ಲ ನನ್ನ ತಾಯಿ ಪುಷ್ಪ ರವರದು ಎಂದು ಹೇಳುತ್ತಾರೆ. ನನ್ನ ತಂದೆ ಶಾಲಾ ಶಿಕ್ಷಕರಾಗಿದ್ದು ಪ್ರಸ್ತುತ ಪೌತಿಯಾಗಿದ್ದು ನನ್ನ ತಾಯಿಗೆ ಪಿಂಚಣಿ ಬರುತ್ತದೆ. ನನ್ನ ಹೆಸರಿನಲ್ಲಿ 2 ಕಾರುಗಳಿವೆ ಎಂದರೆ ಸರಿಯಲ್ಲ. ಪರಶುರಾಮಪುರದಲ್ಲಿ 2 ಮನೆ ನನ್ನ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮದ್ಯಾಹ್ನದ ಬೋಜನದ ಸಮಯವಾಗಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.

**ಕ್ರಿ ಮಿಸ್ ನಂ:280/2016**

**ಆರ್.ಡಬ್ಲ್ಯೂ-01**

**<u>ದಿನಾಂಕ:05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಕೆ.ಬಿ.ಪಿ., ವಾದಿ ಪರ ವಕೀಲರಿಂದ</u>**

5.ಪರಶುರಾಮಪುರ ಪಂಚಾಯತಿಯಲ್ಲಿ ಖಾತೆ ನಂಬರ್ 1140 ಹಾಗೂ ಈ ಖಾತೆ ನಂಬರ್ 151000100600101320 ಹೊಂದಿರುವ ಒಟ್ಟು 27 ಚ.ಮೀ. ವಿಸ್ತೀರ್ಣವುಳ್ಳ ಎಸಿ ಶೀಟ್ ಮನೆ ಮತ್ತು ಖಾತೆ ನಂಬರ್ 1141 ಹೊಂದಿರುವ ಒಟ್ಟು 31.50 ಚ.ಮೀ. ವಿಸ್ತೀರ್ಣವುಳ್ಳ ಆರ್.ಸಿ.ಸಿ ಮನೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವು ಮಾರಾಟವಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ 2 ಮನೆಗಳಿಂದ ಮಾಸಿಕ ರೂ.25,000/- ಬಾಡಿಗೆ ಹಣ ನನಗೆ ಬರುತ್ತದೆ ಎಂದರೆ ಸರಿಯಲ್ಲ. ಚಳ್ಳಕೆರೆಯಲ್ಲಿ ನನ್ನ ಹೆಸರಿನಲ್ಲಿ ಖಾತಾ ನಂಬರ್ 1274/11932546 ಹೊಂದಿರುವ 5 ನೇ ಸಂಖ್ಯೆಯ ಒಂದು ನಿವೇಶನ ಇದೆ ಎಂದರೆ ಸರಿಯಲ್ಲ. ಸದರಿ ನಿವೇಶನ ಅಂದಾಜು 30 ಲಕ್ಷ ಬೆಲೆ ಉಳ್ಳದು ಎಂದರೆ ನನಗೆ ಗೊತ್ತಿಲ್ಲ. ಪರಶುರಾಮಪುರದಲ್ಲಿ ಸರ್ವೇ ನಂಬರ್ 20 ಹೊಂದಿರುವ 1 ಎಕರೆ 10 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಈ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ಪರಶುರಾಮಪುರ ಪಟ್ಟಣದ ಸನಿಹದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಿವೇಶನಗಳನ್ನು ವಿಂಗಡಿಸಿದರೆ ರೂ.2 ಕೋಟಿ ರೂಪಾಯಿ ಆದಾಯ ಇದೆ ಎಂದರೆ ಸರಿಯಲ್ಲ. ಸಕ್ಷಿಯು ಒಂದು ಬಾವಚಿತ್ರವನ್ನು ತೋರಿಸಿ ಅದರಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ. ಆದ್ದರಿಂದ ಸದರಿ ಬಾವಚಿತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು. ಬಾವಚಿತ್ರದಲ್ಲಿ ಕಾಣುವ ಲೋಕೇಶ್ ಮೇಲೊಡಿಸ್ ಅನ್ನು ನಾನು ನಡೆಸುತ್ತೇನೆ ಎಂದರೆ ಸಾಕ್ಷಿಯು

ರೂ.500/- ಕ್ಕೆ ಕೂಲಿಗೆಂದು ನಾನು ಹಾಡನ್ನು ಹೇಳುತ್ತೇನೆ ಎಂದು ನುಡಿಯುತ್ತಾರೆ. ಲೋಕೇಶ್ ಮೇಲೊಡಿಸ್ ನನ್ನದಾಗಿದ್ದು ಕಾರ್ಯಕ್ರಮ ಒಂದಕ್ಕೆ ರೂ.25 ರಿಂದ 50 ಸಾವಿರ ನೀಡುತ್ತಾರೆ ಎಂದರೆ ಸರಿಯಲ್ಲ. ಒಟ್ಟಾರೆಯಾಗಿ ವಾರ್ಷಿಕ ನನಗೆ 30 ಲಕ್ಷ ಆಧಾಯ ಇರುತ್ತದೆ ಎಂದರೆ ಸರಿಯಲ್ಲ. ವಾರ್ಷಿಕ 30 ಲಕ್ಷ ಆಧಾಯ ಇರುವ ಕಾರಣ ನಾನು ಮಾಸಿಕ 50 ಸಾವಿರವನ್ನು ಜೀವನಾಂಶ ವಾಗಿ ನನ್ನ ಹೆಂಡತಿ ಮಕ್ಕಳಿಗೆ ನಾನು ನೀಡಬಲ್ಲೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6.ಮೂರು ಜನ ಹೆಣ್ಣು ಮಕ್ಕಳ ಪಾಲನೆ ಪೋಷಣೆ ಔಷದೋಪಚಾರ ಮತ್ತು ಸದರಿಯವರ ವಿದ್ಯಾಭ್ಯಾಸಕ್ಕೆ ತಿಂಗಳಿಗೆ ರೂ.50 ಸಾವಿರ ಹಣ ಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. 2016 ರಿಂದ ಹೆಂಡತಿ ಮತ್ತು ಮಕ್ಕಳಿಗೆ ಯಾವುದೇ ಜೀವನಾಂಶ ನೀಡಿಲ್ಲ ಎಂದರೆ ಸಾಕ್ಷಿಯು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಜೀವನಾಂಶ ವನ್ನು ನೀಡಲಾಗಿದೆ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ನ್ಯಾಯಾಲಯದ ಆದೇಶದ ಪ್ರಕಾರ ಈ ದಿನಾಂಕಕ್ಕೆ ಸುಮಾರು 5 ಲಕ್ಷ ಜೀವನಾಂಶ ತಲುಪಬೇಕು ಎಂದರೆ ನನಗೆ ಗೊತ್ತಿಲ್ಲ. ಆಧಾಯ ಇದ್ದರೂ ಸಹ ಅರ್ಜಿದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಮಧ್ಯಂತರ ಜೀವನಾಂಶದ ಆದೇಶವನ್ನು ಪಾಲಿಸಿಲ್ಲ ಎಂದರೆ ಸರಿಯಲ್ಲ. ನನಗೆ ಬಹಳಷ್ಟು ಆಧಾಯ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.